**All India Radio: Bangalore**
**National Bulletin In Kannada**
**06.07.2025 19.35 p.m.**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**06.07.2025 19.35 p.m.**
**<><><><>**

ಮುಖ್ಯಾಂಶಗಳು

1. ಬ್ರೆಜಿಲ್‌ನಲ್ಲಿ ಇಂದು ನಡೆಯಲಿರುವ ಬ್ರಿಕ್ಸ್ ಶೃಂಗಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾಗಿ
2. ನ್ಯೂ ಡೆವಲ್ಪಮೆಂಟ್ ಬ್ಯಾಂಕ್‌ಗೆ ಕೊಲೊಂಬಿಯಾ, ಉಜ್ಬೇಕಿಸ್ತಾನ ಅಧಿಕೃತ ಸೇರ್ಪಡೆ
3. ರಾಜತಾಂತ್ರಿಕ ಸಂಬಂಧ ನವೀಕರಿಸಿದ ಸಿರಿಯಾ, ಬ್ರಿಟನ್
4. ವಿಂಬಲ್ಡನ್ ಟೆನಿಸ್ : ಮಿಶ್ರ ಡಬಲ್ಸ್ ವಿಭಾಗದಲ್ಲಿ ಯೂಕಿ ಭಾಂಬ್ರಿ-ಕ್ಸಿನ್ಯು ಜಿಯಾಂಗ್, ಮರ್ಸೆಲೊ-ಶುವಾಯ್ ಜಾಂಗ್ ಮುಖಾಮುಖಿ

<><><><>

ಸದಸ್ಯ ರಾಷ್ಟ್ರಗಳ ನಡುವಿನ ಸಹಕಾರ ಹೆಚ್ಚಿಸಲು ಇಂದು ರಾತ್ರಿ ಬ್ರೆಜಿಲ್‌ನ ರಿಯೊ ಡಿ ಜನೈರೊ ದಲ್ಲಿ ಪ್ರಾರಂಭವಾಗುವ ಬ್ರಿಕ್ಸ್ ಶೃಂಗಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾಗವಹಿಸಲಿದ್ದಾರೆ. ೧೭ನೇ ಬ್ರಿಕ್ಸ್ ಶೃಂಗಸಭೆಯಲ್ಲಿ ಜಾಗತಿಕ ಆಡಳಿತ ಸುಧಾರಣೆ, ಹವಾಮಾನ ಬದಲಾವಣೆ ಸವಾಲುಗಳು, ಕೃತಕಬುದ್ಧಿಮತ್ತೆ ಮತ್ತು ಇತರೆ ವಿಷಯಗಳ ಕುರಿತು ಚರ್ಚಿಸಲಾಗುತ್ತದೆ. ಆರೋಗ್ಯ ಕ್ಷೇತ್ರದಲ್ಲಿ ಸಹಕಾರ ವಿಸ್ತರಿಸಲು, ಜಾಗತಿಕ ಸಮಸ್ಯೆಗಳನ್ನು ಪರಿಹರಿಸಲು ಕೃತಕ ಬುದ್ಧಿಮತ್ತೆಯ ನೈತಿಕ ಬಳಕೆ, ಹವಾಮಾನ ಬದಲಾವಣೆಯ ಸವಾಲನ್ನು ಎದುರಿಸುವ ಆರ್ಥಿಕ ಅಗತ್ಯಗಳನ್ನು ಪೂರೈಸಲು ಬಹುಪಕ್ಷೀಯ ಬ್ಯಾಂಕ್‌ಗಳನ್ನು ಸುಧಾರಿಸಲು ಹಾಗೂ ಸಮತೋಲಿತ ಮತ್ತು ಅಂತರ್ಗತ ಜಾಗತಿಕ ಆಡಳಿತವನ್ನು ಬೆಳೆಸಲು ಈ ಶೃಂಗಸಭೆ ಬಯಸುತ್ತದೆ. ಶೃಂಗಸಭೆಯ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ, ಇತರೆ ನಾಯಕರೊಂದಿಗೆ ದ್ವಿಪಕ್ಷೀಯ ಸಭೆಗಳನ್ನು ನಡೆಸುವ ಸಾಧ್ಯತೆಯಿದೆ. ಇದೇ ವೇಳೆ ಅವರು, ಬ್ರೆಜಿಲ್ ಅಧ್ಯಕ್ಷ ಲೂಯಿಸ್ ಇನಾಸಿಯೊ ಲುಲಾ ಡ ಸಿಲ್ವಾ ಅವರೊಂದಿಗೆ ಭಾರತ ಮತ್ತು ಬ್ರೆಜಿಲ್ ನಡುವೆ ಕಾರ್ಯತಂತ್ರದ ಸಂಬಂಧಗಳನ್ನು ಬಲಗೊಳಿಸುವ ಕುರಿತು ಸಭೆ ನಡೆಸಲಿದ್ದಾರೆ. ಈ ಕುರಿತು ಬ್ರೆಜಿಲ್‌ನ ರಿಯೊ ಡಿ ಜನೈರೊದಿಂದ ನಮ್ಮ ಬಾತ್ಮೀದಾರರಾದ ಸುಧೀಂದ್ರ ಅವರಿಂದ ಹೆಚ್ಚಿನ ಮಾಹಿತಿ

**ಧ್ವನಿ : ಸುಧೀಂದ್ರ (೪೧ ಸೆಕೆಂಡ್‌ಗಳು)**

<><><><>

೧೭ನೇ ಬ್ರಿಕ್ಸ್ ಶೃಂಗಸಭೆಗೂ ಮುನ್ನ, ಕೊಲೊಂಬಿಯಾ ಮತ್ತು ಉಜ್ಬೇಕಿಸ್ತಾನ ಅಧಿಕೃತವಾಗಿ ನ್ಯೂ ಡೆವಲ್ಪಮೆಂಟ್ ಬ್ಯಾಂಕ್ - ಎನ್‌ಡಿಬಿಗೆ ಸೇರಿಕೊಂಡಿವೆ. ಈ ಮೂಲಕ ಎನ್‌ಡಿಬಿ ಸದಸ್ಯ ದೇಶಗಳ ಸಂಖ್ಯೆ ೧೧ಕ್ಕೆ ಏರಿಕೆಯಾಗಿದೆ. ೨೦೧೫ರಲ್ಲಿ ಮೂಲ ಬ್ರಿಕ್ಸ್ ರಾಷ್ಟ್ರಗಳಿಂದ ಸ್ಥಾಪಿಸಲ್ಪಟ್ಟ ಎನ್‌ಡಿಬಿ, ಉದಯೋನ್ಮುಖ ಆರ್ಥಿಕತೆಯಲ್ಲಿ ಮೂಲಸೌಕರ್ಯ ಮತ್ತು ಸುಸ್ಥಿರ ಅಭಿವೃದ್ಧಿಗೆ ಹಣಕಾಸು ಒದಗಿಸುವ ಗುರಿಯನ್ನು ಹೊಂದಿದೆ. ಸದಸ್ಯ ರಾಷ್ಟ್ರಗಳು ೪ನೇ ಕೈಗಾರಿಕಾ ಕ್ರಾಂತಿಗೆ ಹೊಂದಿಕೊಳ್ಳಲು ಸಹಾಯ ಮಾಡಲು ನಾವೀನ್ಯತೆ, ವಿಜ್ಞಾನ ಮತ್ತು ತಂತ್ರಜ್ಞಾನದ ಮೇಲೆ ಕೇಂದ್ರೀಕರಿಸುವ ಮೂಲಕ ಜಾಗತಿಕ ದಕ್ಷಿಣವನ್ನು ಬೆಂಬಲಿಸುವುದು ಎನ್‌ಡಿಬಿ ಧ್ಯೇಯವಾಗಿದೆ ಎಂದು ಎನ್‌ಡಿಬಿ ಅಧ್ಯಕ್ಷೆ ದಿಲ್ಮಾ ರೌಸೆಫ್ ಹೇಳಿದ್ದಾರೆ.

<><><><>

ಸಹಕಾರಿ ಸಂಘಗಳು ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಪ್ರಮುಖ ಕೊಡುಗೆ ನೀಡುತ್ತಿವೆ ಎಂದು ಕೇಂದ್ರ ಸಹಕಾರ ಸಚಿವ ಅಮಿತ್ ಶಾ ಹೇಳಿದ್ದಾರೆ. ಗುಜರಾತ್‌ನ ಆನಂದ್‌ನಲ್ಲಿ ಇಂದು ಅಮೂಲ್ ಮತ್ತು ರಾಷ್ಟ್ರೀಯ ಡೇರಿ ಅಭಿವೃದ್ಧಿ ಮಂಡಳಿಯ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಉದ್ಘಾಟಿಸಿದ ಸಚಿವ ಅಮಿತ್ ಶಾ, ೨ ಲಕ್ಷ ಹೊಸ ಪ್ರಾಥಮಿಕ ಕೃಷಿ ಸಹಕಾರ ಸಂಘಗಳು, ಸಹಕಾರಿತ ವಿಶ್ವವಿದ್ಯಾಲಯ, ಆಹಾರ ಧಾನ್ಯಗಳ ಉತ್ಪಾದನೆ ಮತ್ತು ಮಾರಾಟಕ್ಕೆ ಸಂಬಂಧಿಸಿದ ಮೂರು ಸಹಕಾರಿ ಸಂಘಗಳು ಹಾಗೂ ಡೇರಿಗೆ ಸಂಬಂಧಿಸಿದ ಭೂ ಸಹಕಾರಿ ಸಂಘಗಳು ಒಟ್ಟಾಗಿ ದೇಶದ ಸಹಕಾರಿ ಚಳವಳಿಯನ್ನು ಮತ್ತಷ್ಟು ಬಲಪಡಿಸುತ್ತಿವೆ ಎಂದು ತಿಳಿಸಿದರು. ಇದೇ ವೇಳೆ ಖ್ಯಾತ ಚಿಂತಕ, ಶಿಕ್ಷಣ ತಜ್ಞ ಡಾ. ಶ್ಯಾಮ್ ಪ್ರಸಾದ್ ಮುಖರ್ಜಿಯವರ ಜನ್ಮದಿನಾಚರಣೆ ಹಿನ್ನೆಲೆಯಲ್ಲಿ ಅವರಿಗೆ ಗೌರವ ನಮನ ಸಲ್ಲಿಸಿದ ಸಚಿವ ಅಮಿತ್ ಶಾ, ಡಾ. ಶ್ಯಾಮ್ ಪ್ರಸಾದ್ ಮುಖರ್ಜಿ ಅವರು ಇಲ್ಲದಿದ್ದರೆ, ಕಾಶ್ಮೀರವು ಭಾರತದ ಅವಿಭಾಜ್ಯ ಅಂಗವಾಗುತ್ತಿರಲಿಲ್ಲ ಎಂದು ಅಭಿಪ್ರಾಯಪಟ್ಟರು.

<><><>

ದೆಹಲಿಯಲ್ಲಿಂದು ೧ ಸಾವಿರದ ೨೦೦ಕ್ಕೂ ಹೆಚ್ಚು ನರ್ಸಿಂಗ್ ಅಧಿಕಾರಿಗಳಿಗೆ ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಜಗತ್ ಪ್ರಕಾಶ್ ನಡ್ಡಾ ನೇಮಕಾತಿ ಪತ್ರಗಳನ್ನು ವಿತರಿಸಿದರು. ಈ ವೇಳೆ ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ ಉಪಸ್ಥಿತರಿದ್ದರು. ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಸಚಿವ ಜೆ.ಪಿ.ನಡ್ಡಾ, ಭಾರತದ ಆರೋಗ್ಯ ನೀತಿಯು ಇಂದು ಗುಣಪಡಿಸುವ ಚಿಕಿತ್ಸೆಯಿಂದ ತಡೆಗಟ್ಟುವ ಚಿಕಿತ್ಸೆಯತ್ತ ಸಾಗಿದೆ. ಇಂದು ದೇಶದ ಆರೋಗ್ಯ ವ್ಯವಸ್ಥೆಯು ಎಲ್ಲರನ್ನು ಒಳಗೊಳ್ಳುವಂತಿದೆ. ಚಿಕಿತ್ಸೆಯ ಮೇಲೆ ಮಾತ್ರವಲ್ಲದೇ ಪುನರ್ ವಸತಿಯ ಮೇಲೂ ಗಮನಹರಿಸಿದೆ ಎಂದು ಹೇಳಿದರು.

<><><>

ಎರಡು ದಿನಗಳ ಭೇಟಿಗಾಗಿ ಕೇರಳಕ್ಕೆ ಇಂದು ಆಗಮಿಸಿರುವ ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್, ನಾಳೆ ಬೆಳಗ್ಗೆ ಗುರುವಾಯುರ್ ದೇಗುಲಕ್ಕೆ ಭೇಟಿ ನೀಡಲಿದ್ದಾರೆ. ನಂತರ ಅವರು, ಎರ್ನಾಕುಲಂನ ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಯೊಂದಿಗೆ ಸಂವಾದ ನಡೆಸಲಿದ್ದಾರೆ.

<><><>

ನವದೆಹಲಿಯಲ್ಲಿ ನಾಳೆ ಲೆಕ್ಕಪರಿಶೋಧಕರ ಸಮ್ಮೇಳನವನ್ನು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಉದ್ಘಾಟಿಸಲಿದ್ದಾರೆ. ಮೂರು ದಿನಗಳ ಈ ಸಮ್ಮೇಳನವನ್ನು ರಕ್ಷಣಾ ಲೆಕ್ಕಪತ್ರ ಇಲಾಖೆ ಆಯೋಜಿಸಿದೆ. ಬಜೆಟ್ ಮತ್ತು ಖಾತೆಗಳ ಸುಧಾರಣೆ, ಆಂತರಿಕ ಲೆಕ್ಕ ಪರಿಶೋಧನೆ, ಪುನರ್‌ರಚನೆ, ಸಹಯೋಗದ ಸಂಶೋಧನೆ, ಬೆಲೆ ನಿಗದಿಯಲ್ಲಿ ನಾವೀನ್ಯತೆ ಮತ್ತು ಸಾಮರ್ಥ್ಯ ವೃದ್ಧಿಯಂತಹ ಕ್ಷೇತ್ರಗಳನ್ನು ಒಳಗೊಂಡ ೮ ಉನ್ನತ ಮಟ್ಟದ ವ್ಯವಹಾರ ಅಧಿವೇಶನವನ್ನು ಈ ಸಮ್ಮೇಳನವು ಒಳಗೊಂಡಿರುತ್ತದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

<><><>

ಬ್ರಿಟನ್ ವಿದೇಶಾಂಗ ಸಚಿವ ಡೇವಿಡ್ ಲ್ಯಾಮಿ ಅವರ ಡಮಾಸ್ಕಸ್ ಭೇಟಿಯೊಂದಿಗೆ ಸಿರಿಯಾ ಮತ್ತು ಬ್ರಿಟನ್, ಅಧಿಕೃತವಾಗಿ ತಮ್ಮ ರಾಜತಾಂತ್ರಿಕ ಸಂಬಂಧಗಳನ್ನು ನವೀಕರಿಸಿವೆ ಎಂದು ಉಭಯ ಸರ್ಕಾರಗಳು ಬಿಡುಗಡೆಗೊಳಿಸಿದ ಜಂಟಿ ಹೇಳಿಕೆ ತಿಳಿಸಿದೆ. ಲಂಡನ್‌ನಲ್ಲಿರುವ ಸಿರಿಯಾದ ರಾಯಭಾರಿ ಕಚೇರಿಯನ್ನು ಮತ್ತೆ ತೆರೆಯಲು ಹಾಗೂ ದ್ವಿಪಕ್ಷೀಯ ಸಹಕಾರವನ್ನು ಬಲಪಡಿಸುವ ಗುರಿಯನ್ನು ಹೊಂದಿರುವ ಸಿರಿಯಾ-ಬ್ರಿಟನ್ ಆರ್ಥಿಕ ಮಂಡಳಿಯನ್ನು ಸ್ಥಾಪಿಸಲು ಉಭಯ ದೇಶಗಳು ಪರಸ್ಪರ ಒಪ್ಪಿಗೆ ಸೂಚಿಸಿವೆ. ಭೇಟಿಯ ಸಮಯದಲ್ಲಿ ಬ್ರಿಟನ್ ವಿದೇಶಾಂಗ ಸಚಿವ ಡೇವಿಡ್ ಲ್ಯಾಮಿ, ಸಿರಿಯಾಗೆ ಮಾನವೀಯ ಪರಿಹಾರವನ್ನು ಒದಗಿಸಲು, ಶಿಕ್ಷಣ ಮತ್ತು ಜೀವನೋಪಾಯ ಹೆಚ್ಚಿಸಲು ಹಾಗೂ ಸಿರಿಯನ್ ನಿರಾಶ್ರಿತರನ್ನು

ಅತಿಥ್ಯವಹಿಸುವ ನೆರೆಯ ದೇಶಗಳನ್ನು ಬೆಂಬಲಿಸಲು ೧೧೧.೩ ದಶಲಕ್ಷ ಡಾಲರ್‌ಗಳ ಆರ್ಥಿಕ ನೆರವಿನ ಪ್ಯಾಕೇಜನ್ನು ಘೋಷಿಸಿದರು.

<><><><>

ಲಂಡನ್‌ನಲ್ಲಿ ನಡೆಯುತ್ತಿರುವ ವಿಂಬಲ್ಡನ್ ಟೆನಿಸ್ ಪಂದ್ಯಾವಳಿಯ ಮಿಶ್ರ ಡಬಲ್ಸ್ ವಿಭಾಗದಲ್ಲಿ ಭಾರತದ ಯೂಕಿ ಭಾಂಬ್ರಿ ಮತ್ತು ಚೀನಾದ ಕ್ಸಿನ್ಯು ಜಿಯಾಂಗ್ ಜೋಡಿಯು ಇಂದು ಮರ್ಸೆಲೊ ಅರೆವಾಲೊ - ಶುವಾಯ್ ಜಾಂಗ್ ಜೋಡಿಯನ್ನು ಎದುರಿಸಲಿದೆ. ಪುರುಷರ ಸಿಂಗಲ್ಸ್‌ನಲ್ಲಿ ಹಾಲಿ ಚಾಂಪಿಯನ್ ಕಾರ್ಲೋಸ್ ಅಲ್ಕರಾಜ್, ಆಂಡ್ರೆ ರುಬ್ಲೆವ್ ಅವರನ್ನು ಎದುರಿಸಲಿದ್ದಾರೆ.

<><><><>

ಇಂಗ್ಲೆಂಡ್‌ನ ಬರ್ಮಿಂಗ್ ಹ್ಯಾಮ್‌ನ ಎಡ್ಜ್‌ಬಾಸ್ಟನ್‌ನಲ್ಲಿ ನಡೆಯುತ್ತಿರುವ ೨ನೇ ಟೆಸ್ಟ್‌ನ ಅಂತಿಮ ದಿನವಾದ ಇಂದು ಇಂಗ್ಲೆಂಡ್ ತನ್ನ ೨ನೇ ಇನ್ನಿಂಗ್ಸ್‌ನಲ್ಲಿ ಇತ್ತೀಚಿನ ವರದಿ ಬಂದಾಗ ೬ ವಿಕೆಟ್‌ಗಳಿಗೆ ೧೫೩ ರನ್ ಮಾಡಿ ಆಡುತ್ತಿದೆ.

ಭಾರತ ತನ್ನ ಮೊದಲ ಇನ್ನಿಂಗ್ಸ್‌ನಲ್ಲಿ ೫೮೭ ರನ್ ಹಾಗೂ ೨ನೇ ಇನ್ನಿಂಗ್ಸ್‌ನಲ್ಲಿ ೪೨೭ ರನ್ ಗಳಿಸಿದೆ. ಇಂಗ್ಲೆಂಡ್ ತನ್ನ ಮೊದಲ ಇನ್ನಿಂಗ್ಸ್‌ನಲ್ಲಿ ೪೦೭ ರನ್ ಗಳಿಸಿದೆ.

<><><><>

ಕೈಲಾಸ ಮಾನಸ ಸರೋವರ ಯಾತ್ರಿಕರ ೨ನೇ ತಂಡವು ಇಂದು ಕೈಲಾಸ ಪರ್ವತ ಮತ್ತು ಮಾನಸ ಸರೋವರಕ್ಕೆ ತಮ್ಮ ಪವಿತ್ರ ಯಾತ್ರೆಯನ್ನು ಪೂರ್ಣಗೊಳಿಸಿದ ನಂತರ ಗ್ಯಾಂಗ್ಟಕ್‌ಗೆ ಮರಳಿದೆ. ೪೭ ಯಾತ್ರಿಕರನ್ನು ಒಳಗೊಂಡ ೨ನೇ ತಂಡವು ಕಳೆದ ತಿಂಗಳು ೨೫ ರಂದು ನಾಥು ಲಾ ಗಡಿಯನ್ನು ದಾಟಿ ತೀರ್ಥಯಾತ್ರೆಗೆ ತಮ್ಮ ಪ್ರಯಾಣವನ್ನು ಪ್ರಾರಂಭಿಸಿತ್ತು. ಐತಿಹಾಸಿಕ ಮಾನಸ ಸರೋವರ ಯಾತ್ರೆಯು ಕಳೆದ ತಿಂಗಳು ೨೦ರಂದು ನಾಥು ಲಾ ದಿಂದ ಪ್ರಾರಂಭವಾಯಿತು. ಸಿಕ್ಕಿಂ ರಾಜ್ಯಪಾಲ ಓಂಪ್ರಕಾಶ್ ಮಾಥುರ್ ಯಾತ್ರೆಗೆ ಚಾಲನೆ ನೀಡಿದರು. ಮೊದಲ ತಂಡದಲ್ಲಿ ೩೬ ಯಾತ್ರಿಕರು ಇದ್ದರು.

<><><><>

ಗಾಜಾದಲ್ಲಿ ಕದನ ವಿರಾಮ  ಮಾತುಕತೆಗಾಗಿ ಇಂದು ಕತಾರ್‌ಗೆ ಸಂಧಾನ ತಂಡವನ್ನು ಕಳುಹಿಸುವುದಾಗಿ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ತಿಳಿಸಿದ್ದಾರೆ.  ಸುಮಾರು ೨೧ ತಿಂಗಳ ಕಾಲ ನಡೆದ ಸಂಘರ್ಷವನ್ನು ಕೊನೆಗೊಳಿಸಲು ಹೊಸ ರಾಜತಾಂತ್ರಿಕ ಪ್ರಯತ್ನಗಳ ಮಧ್ಯೆ ಈ ಕ್ರಮ ಕೈಗೊಳ್ಳಲಾಗಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>